Daily & Weeky SATYAVADI Foundcd 1917

Regd. No. M 1299 ಎಸೆಕ್ಷ ೩ಪೈ

ಸತ್ಯವಾದಿ

ಸಂಚಿಕೆ 26 (ಶನಿವಾರ 14—11—1942 (ಸಂಪುಟ 48

ತಾಮ್ರದ ನಾಣ್ಯಗಳೆಲ್ಲ ಎಲ್ಲಿ ಅಡಗುತ್ತವೆ ?

ಹೋಟಲಿನ ಬಾಗಿಲಲ್ಲೇ ' ಚಿಲ್ಲರೆ ಸಿಕ್ಕುವುದಿಲ್ಲ ' ' ಅಣೆಗಳಿಗೆ ಸರಿಯಾಗಿ ವ್ಯಾಪಾರ ಮಾಡಿ ಮುಂತಾದ ಪ್ರಕಟಣೆಗಳು ಈಚೆಗೆ ಅಧಿಕವಾಗಿವೆ. ಈ ಪ್ರಕಟಣೆಗಳು ಒಂದು ರೀತಿಯಲ್ಲಿ ಗಿಂಕಿಗೆ ಚಿಲ್ಲರೆಯನ್ನೇ ತಂದು ತಿನ್ನಬೇಕೆಂದು ವಿಧಿಸುವುದೆಂದೂ ಅನುಚಿತವಾಗಲಾರದು. ಉತ್ತರ ದೇಶದಲ್ಲಂತೂ ತಾಮ್ರದ ನಾಣ್ಯಗಳಿಗೆ ಕ್ಷಾಮವೇ ಪ್ರಸ್ತುತವಾದಂತಿರುವ ದೆಂದು ಹೇಳಲಾಗಿದೆ. ಅನೇಕ ಕಡೆ ತಮ್ಮದೇ ಆದ ಕೂಪನ್ನುಗಳನ್ನೆ ಚಿಲ್ಲರೆ ಕಷ್ಟಕಾಗಿ ಸೃಜಿಸಿದರು. ಇಂತಹ ಕೂಪನ್ನುಗಳು ಕೋಟಿಗಟ್ಟಲೆಯ ಬತವರ ಒಂದಾಣೆಗೆ 11 ಕಾಸನ್ನು ಒದಗಿಸಲು ಅಸಮರ್ಥವೆನ್ನಬಹುದು. ಈ ಕಾಸು ಮಂಗಮಾಯವಾದರೂ ಹೇಗಾಯಿತೆನ್ನುವುದಕ್ಕೆ ಇರುವ ಸಮಾಧಾನವೆಂದರೆ ತಾಮ್ರಕ್ಕಾಗಿ ನಾಣ್ಯಗಳು ಕರಗಿಸಲಾಗುತ್ತಿದೆ ಎಂಬುದು. ಈ ಯುದ್ಧ ಶೋಷಣದಿಂದ ಕಳೆದ ಮಾರ್ಚಿವರೆಗೇ 8 ಕೋಟಿ ಬೆಲೆಬಾಳುವ ನಾಣ್ಯಗಳು ಚಲಾವಣೆಯಲ್ಲಿರದಾಯಿತು. ಅದೇ ಕಳೆದ ಯುದ್ಧ ಸಮಯದಲ್ಲಿ ಒಟ್ಟು 5 ಕೋಟಿ ಮಾತ್ರ ಚಲಾವಣೆಗೆ ತರಲಾಗಿತ್ತು. ಇತ್ತೀಚೆಗೆ ಸುಮಾರು 13 ಲಕ್ಷ ಬೆಲೆಯ ತಾಮ್ರದ ನಾಣ್ಯಗಳು ಕಾಣದಂತಾಗಿವೆಯೆಂದು ತಿಳಿಯಬಂದಿದೆ. ಹೀಗೆ ತಗಿರುವುದಕ್ಕೆ ಲೋಹದ ವೆಚ್ಚದಲ್ಲಿ ಅದಕ್ಕಿರುವ ಅಧಿಕ ಮೌಲ್ಯವೇ ಕಾರಣವಾಗಿದ್ದೀತು. ಬೊಂಬಾಯಿನ ಒಬ್ಬ ಪತ್ರಿಕಾ ಲೇಖಕನ ಲೆಕ್ಕದಂತೆ 135 ರೂಪಾಯಿ ಬೆಲೆಯ ಸೂರ್ ಕಾಸುಗಳನ್ನು ಕೂಡಿಸಿದರೆ 200 ರೂಪಾಯಿ ಬೆಲೆಯಾಗುವುದು. ಇದಕ್ಕೆ ಸಂಬಂಧಪಟ್ಟ ಏನಾದರೊಂದು ಗತಿಯನ್ನು ಕಲ್ಪಿಸುವುದು ತುರ್ತಾದ ಅವಶ್ಯಕವು.

ರಣರಂಗದ ಸಂಗತಿ

ಸ್ಟಾಲಿನ್‌ಗ್ರಾಡಿನಲ್ಲಿ ಹೋರಾಟ ಕಮ್ಮಿಯಾಗಿದ್ದಿತು. ಆದರೆ ಜರ್ಮನರು ಹೊಸ ಸೈನ್ಯಗಳನ್ನು ತಂದು ಬಂಪು ಭಾಗ ಮತ್ತೆ ಮುತ್ತಿರುವರು. ಅವರ ಒತ್ತಾಯ ಹೆಚ್ಚಾಗಿದೆ. ನೊವೋರೊಸಿಸ್ಕ್‌ನಲ್ಲಿ ರಷ್ಯನರು ಮುನ್ನುಗ್ಗುತ್ತಿದ್ದಾರೆ.

ಮಿತ್ರಸಮರಪಡೆಯವರು ಟ್ಯೂನಿಸ್ಸಿನ ಮೇಲೆ ಧಾಳಿ ನಡೆಸಿದ್ದಾರೆ. ೨೦ ಆಕ್ಸಿಸ್ ವಿಮಾನಗಳು ಧ್ವಂಸ ಮಾಡಲಾಗಿದೆ.

ಇಟಲಿ ಕಡೆಗೆ ಬಲ್‌ಗೇರಿಯಾ ಮತ್ತು ರೊಮೇನಿಯಾದ ಪೈಲುಗಳೂ ಜರ್ಮನ್ ಸೋಲ್ಜರುಗಳಿಂದ ಕೂಡಿ, ಬರುತ್ತಿರುವುದಾಗಿ ವರ್ತಮಾನ

ಏನು, ಆರೋಗ್ಯವೇ?

ವಿಸೆಂಟಿಸೈಡ್
ದಾಯ್ರಂಭಾದಪುಡಿ
ಪಾಕಿಪ್ಪೇಕ್ಕ

Dysenticide
SPECIFIC FOR
DYSENTERY

ಆಮಶಂಕೆ ಮತ್ತು ಅತಿಸಾರ
ಹೊಲಿಗಿಸುವಂಶ

ಪ್ಯಾಕೆಟ್ ಒಂದಕ್ಕೆ ೨ ಆಣೆ, ಹತ್ತು ಪ್ಯಾಕೆಟ್‌ನ ಪೆಟ್ಟಿಗೆ ೧-೪-೦.
ಎಲ್ಲಾ ಕೆಮಿಸ್ಟರಲ್ಲೂ ಬೂರೆಯುತ್ತೆ.

ಹೊಸಹೊಸ ಸಮಾಚಾರ

ಡೆಲ್ಲಿಯಲ್ಲಿಯ ಒಂದು ಮನೆಯನ್ನು ಜೈನೀಸ್ ಕಮೂಷನರ ಉಪಯೋಗಕ್ಕಾಗಿ ಬೇಕೆಂದು ಸರಕಾರದವರು ಕೋರಿದ್ದರು. ಆದರೆ ಮನೆ ಮಾಲೀಕನು ಕೊಡದೆ ಮನೆಯನ್ನು ತನ್ನ ಸುಪರ್ದಿನಲ್ಲಿಟ್ಟುಕೊಂಡುದಕ್ಕಾಗಿ ಅವನ ಮೇಲೆ ಡಿಫೆನ್ಸ್ ರೂಲ್ಸ್ ಮೇರೆ ಮೊಕದ್ದಮೆ ರಿಜಿಸ್ಟರ್ ಮಾಡಿಕೊಳ್ಳಲಾಗಿದೆಯೆಂದು ತಿಳಿಯಬಂದಿದೆ.

ಮಿ|| ಜಿನ್ನಾರವರು ಪತ್ರಿಕೋದ್ಯೋಗಿಗಳನ್ನು ಲಾಹೋರಿನಲ್ಲಿ 20ನೇ ತಾರೀಖಿನ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ ಭೇಟಿಮಾಡುವರು.

ಸಿಂಧಿನಿಂದ ಕ್ವಿನೈನನ್ನು ಭೂಮಿ ಮೂಲಕ ಸಮುದ್ರ ಮೂಲಕ, ಸಾಗಿಸಬಾರದೆಂದು ಡಿಫೆನ್ಸ್ ರೂಲ್ ಮೇರೆ ಅಲ್ಲಿ ಸರ್ಕಾರದ ಆಜ್ಞೆಯಾಗಿರುವುದಾಗಿ ತಿಳಿಯಬಂದಿದೆ.

ಲಕ್ನೋನಿನ ಹಬ್ಬಣದ ಮಧ್ಯದಲ್ಲಿರುವ ಒಂದು ಬ್ಯಾಂಕಿನಲ್ಲಿ ಹಗಲಿನಲ್ಲೇ ದರೋಡೆ ನಡೆದು, ದರೋಡೆಗಾರರು ಬ್ಯಾಂಕಿನ ನೌಕರರನ್ನು ಪಿಸ್ತೂಲಿನಿಂದ ಹೆದರಿಸಿ ಸಾವಿರ ರೂ ವಾಯಿಯೊಡನೆ ಪರಾರಿಯಾದರು.

ವೈಸರಾಯರವರು ಶ್ರೀ ರಾಜಗೋಪಾಲಾಚಾರ್ಯರಿಗೆ ಗಾಂಧೀಜಿಯವರನ್ನು ನೋಡಲು ಅವಕಾಶವನ್ನು ತಿರಸ್ಕರಿಸಿದ್ದು ಯುಕ್ತವಾದುದಲ್ಲವೆಂದು ಅನೇಕ ಮುಖಂಡರ ಅಭಿಪ್ರಾಯವಾಗಿದೆ.

ಭೀಮಾನಂದ ಕೆಲ ಹಳ್ಳಿಗಳ ಮೇಲೆ ಪುಂಡು ಕಂದಾಯ ವಿಧಿಸಲಾಗಿದೆ.

ಅಹಮದಾಬಾದಿನ ಕಲಂಪುರದಲ್ಲಿ ಹೆತ್ತೋಟಿಗೆ ಬಾರದ ನೆಪ್ಪು ಕಲ್ಲು ಹಸೆಯುತ್ತಿದ್ದ ಹೊಂಬಿಗಾರರ ಮೇಲೆ 12ನೇ ತಾರೀಖು ಗುಂಡು ಹಾರಿಸಲಾಯಿತೆಂದೂ, ಏನೂ ಸಾವುನೋವಾಗಿಲ್ಲವೆಂದೂ ತಿಳಿಯಬಂದಿದೆ.

ಇಂಡಿಯಾದಲ್ಲಿ ಬ್ರಿಟಿಷ್ ಬಂಡವಾಳ ೨೦೦ ಪೌಂಡುಗಳಷ್ಟು ಹಾಕಲಾಗಿದೆಯೆಂದೂ ಇಂಡಿಯಾ ರಿಸರ್ವ್ ಬ್ಯಾಂಕು ಆಗಲೇ ಬ್ರಿಟನ್ನಿನ ಸ್ಟರ್ಲಿಂಗ್ ನಿಧಿಯಲ್ಲಿ 300,000,000 ಪೌಂಡು ಸಾಕಿರುವುದೆಂದೂ ಮ್ಯಾಂಚಸ್ಟರ್ ಗಾರ್ಡಿಯನ್ ಪತ್ರಿಕೆಯು ಹೊಗಳಿಕೆಯ ಕಲಂನಲ್ಲಿ ಪ್ರಕಟಿಸಿದೆಯೆಂದು ತಿಳಿಯಬಂದಿದೆ.

ವರ್ತಮಾನ ಪ್ರಕಟಣೆ ವಿಷಯದಲ್ಲಿ ಪತ್ರಿಕೆಗಳ ಮೇಲೆ ವಿಧಿಸಿದ್ದ ಪ್ರತಿಬಂಧಕವನ್ನು ಜಪಾನಿನ ಸರಕಾರವು ತೆಗೆದುಹಾಕಿದೆ.

ಮೈಸೂರು ರಾಜಧಾನಿಯ ಬೊಹಾಲಿನ ರಿಪೇರಿಗಾಗಿ 45 ಸಾವಿರ ರೂಪಾಯಿ ವ್ಯಯ ಮಾಡಲು ಕಳೆದ ವಿಾಟಿಂಗಸಲ್ಲಿ ಅನುಮೋದಿಸಲಾಗಿದೆ

ಅಕ್ಯಾಬ್ ಮೇಲೆ ಆರ್. ಎ. ಎಫ್. ಧಾಳಿ ನಡೆಸಿ ಎರಡು ಶತ್ರು ಸರಬರಾಯಿ ಹಡಗನ್ನು ನಷ್ಟಪಡಿಸಿದೆ.

ಅಲೂಷಿಯನ್‌ನಲ್ಲಿ ಅಮೇರಿಕಾದವರು ದಾಳಿ ನಡೆಸಿ ಜಪಾನ್ ಹಡಗನ್ನು ನಾಶಮಾಡಿದ್ದಾರೆ

ಬ್ರಿಟನ್ನಿನಿಂದ ರಷ್ಯಾಕ್ಕೆ ವಿಮಾನಗಳು, ಟ್ಯಾಂಕುಗಳೂ, ವಾಹನಗಳು, ಮೆಷಿನ್ ಸಾಮಗ್ರಿ ಆಹಾರ ಪದಾರ್ಥ, ಔಷಧ ಸಾಮಾನುಗಳು ಕಳುಹಿಸುತ್ತಿರುವುದಾಗಿ ತಿಳಿಯಬಂದಿದೆ.

Edited Printed & Published by M. S, Krishna Rao, at the Satyavadi Press, Chamaraja Agrahar, Mysore.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಈ ವಾರ ಫಲ ಕಡಮೆ, ನಿಷ್ಠೂರ ಚಂಚಲತೆ ಲಾಭಕಾರ್ಯವಿಲ್ಲ ಅನಾರೋಗ್ಯ. ಸೂರ್ಯನಮಸ್ಕಾರ ಮಾಡಿ ಉತ್ತಮ ತಾ|| 19, 20 ಫಲ ಉತ್ತಮ.

ವೃಷಭ

ಈ ವಾರ ಅಷ್ಟೇನೂ ಉತ್ತಮ ಫಲ ಕಂಡು ಬರಲಿಲ್ಲ. ಸ್ವಜನ ವಿರೋಧ ವ್ಯಯಾಧಿಕ ಎಂದಿನಂತೆ ಇರುತ್ತೆ. ರಾಜಕೀಯ ಜನರಲ್ಲಿ ನಿಷ್ಠೂರ ವಿದ್ಯಾಭಂಗ ಆದಿತ್ಯಹೃದಯ ಪಾರಾಯಣ ಎಳ್ಳು ದಾನ ಮಾಡಿ ಸುಖ ಫಲ. ತಾ|| 18, 19, ಉತ್ತಮ ಫಲ.

ಮಿಥುನ

ನಿಮಗೆ ಉತ್ಸಾಹಾಧಿಕ್ಯ ಕಾರ್ಯದಲ್ಲಿ ದಕ್ಷತೆ ಗೌರವ ಪುಣ್ಯಕಾರ್ಯದಲ್ಲಿ ಆಸಕ್ತಿ ಗೃಹಾಭಿವೃದ್ಧಿ ಸ್ತ್ರೀವರ್ಗ ಸೌಖ್ಯತೆ ಶುಭವಾರ್ತೆ ಭೂ ವ್ಯವಸಾಯದಲ್ಲಿ ಫಲಸಿದ್ಧಿ.

ಕರ್ಕಾಟಕ

ನಿಮಗೆ ಎಂದಿನಂತೆ ಶತ್ರುಗಳು ಮುಂದಾಗಿ ಇರುವರು ಲಾಭ ಕಾರ್ಯದಲ್ಲಿ ಅಸುಖ ರಾಜಕೀ ಜನರಲ್ಲಿ ವಿರೋಧ. ಚಂಚಲತೆ, ಸಹಸ್ರನಾಮಾರ್ಚನೆ ಮಾ[illegible]ದಾನ ಕೊಡಿ ತಾ|| 19. [illegible]ತ್ತಮ ಸುತಾಧಿಕ್ಯ.

ಸಿಂಹ

ನಿಮ್ಮ ಬಂಧು ಮಿತ್ರಾದಿಗಳಿಂದ ಸೌ[illegible]ಭೂ ಸ್ಥಿತಿಯಿಂದ ಫಲಸಿದ್ಧಿ ಪುಣ್ಯ[illegible]ರ್ಯಸಾನಫಲ ಸಮುದಾಯ ಕಾರ್ಯದಲ್ಲಿ ಸೌಖ್ಯತೆ ಉತ್ಸಾಹಾಧಿಕ್ಯ ತಾ|| 18 19, 29 ವಿರೋಧ ಫಲ ಸಮುದಾಯ ಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು ಚಂಚಲ ಅನಾರೋಗ್ಯ. ಬ್ರಹ್ಮಚಾರಿಗೆ ವಸ್ತ್ರದಾನ ಮಾಡಿ ಫಲ ಉತ್ತಮ.

ಕನ್ಯಾ

ಫಲ ಉತ್ತಮ ಉತ್ಸಾಹಕಾರ ಶುಭವಾರ್ತಾ ಗೃಹಾಭಿವೃದ್ಧಿ ರಾಜಕೀ ಜನರಲ್ಲಿ ಗಣ್ಯತೆ ಧರ್ಮದಲ್ಲಿ ಆಸಕ್ತಿ ಸ್ತ್ರೀಪುತ್ರ ಸೌಖ್ಯತೆ ಲಾಭಾಧಿಕ್ಯ.

ತುಲಾ

ಚಂಚಲತೆ ಎಂದಿನಂತೆ ಇದೆ. ಲಾಭ ಕಡಮೆ ವ್ಯಯಾಧಿಕ ಸೀಜವರ್ಗ ವಿರೋಧ ಪುಣ್ಯಕಾರ್ಯದಲ್ಲಿ ಆಸಕ್ತಿ ಕಡಮೆ. ಅನಾರೋಗ್ಯ ತೊಗರೇಬೇಳೆ ದಾನ ಕೊಡಿ ಉತ್ತಮ.

ವೃಶ್ಚಿಕ

ಈ ವಾರದಲ್ಲಿ ನಿಮಗೆ ಮಿಶ್ರಫಲ, ಸಂಘಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು. ಶತ್ರುವು ಮುಂದಾಗಿ ಇರುವದು ನಿಷ್ಠೂರ ಭಾಷಣಕ್ಕೆ ಅವಕಾಶಕೊಡಬಾರದು. ವ್ಯಯಾಧಿಕ ಬಂಧುವಿರೋಧ ಭೂವ್ಯವಸಾಯ ಫಲ ಉತ್ತಮ ಗೃಹಾಭಿವೃದ್ಧಿ ಈ ವಾರ ಆದಿತ್ಯಹೃದಯ ತೊಲಸೀ ಪೂಜಾ ಮಾಡುವುದರಿಂದ ಕ್ಷೇಮ.

ಧನು

ಸೂರ್ಯನು ವ್ಯಯಕ್ಕೆ ಬಂದರೂ ವಿಶ್ವ ಉತ್ಸಾಹವಾಗಿರುತ್ತೆ. ಸೌಖ್ಯತೆ ಗೃಹಾಭಿವೃದ್ಧಿ ಲಾಭಕಾರ್ಯ ಉತ್ಸಾಹ ಯೆಂದಿನಂತೆ ಇರುತ್ತೆ. ರಾಜಕೀ ಕಾರ್ಯದಲ್ಲಿ ಮುಂದಾಗಿ ಪ್ರವೇಶಿಸಬಾರದು. ಸೀಜರನ್ನು ದೂರಮಾಡಬೇಕು. ತಪಸೀ ಕ್ಷೀರವನ್ನು ಬಿಡಿ ಫಲ ಇನ್ನು ಉತ್ತಮ.

ಮಕರ

ನಿಮ್ಮ ಕಾರ್ಯದಕ್ಷತೆ ಗೌರವ ಭೂವ್ಯವಸಾಯ ಫಲ ಸಿದ್ಧಿಯೆಂದಿನಂತೆ ಇದೆ ಶುಭವಾರ್ತಾ ಸನ್ಮಾನ ಸೌಖ್ಯ ಪುಣ್ಯಕಾರ್ಯ ಗೃಹಾಭಿವೃದ್ಧಿ ಈ ವಾರ ಗೋಪೂಜೆ ಮಾಡಿ ಇನ್ನೂ ಉತ್ತಮವಿರುತ್ತೆ.

ಕುಂಭ

ನಿಮಗೆ ತಾಪತ್ರಯ ಕಮ್ಮಿಗೆ ಬರುತ್ತೆ. ಶತ್ರು ದೂರವಾಗುವರು. ಆರೋಗ್ಯ ಉತ್ತಮ ಬಂಧು ಮಿತ್ರಾದಿ ಸಮಾಗಮ ದೊಡ್ಡವರ ಆಶ್ರಯ ದೇವತಾ ಸೇವಾ ಫಲ ತಾ|| 16 ಕುಜ ಪ್ರೀತಿ ಈತ ಪ್ರೀತಿ ಮಾಡಿಕೊಳ್ಳಬೇಕು. ವೇದಾದೋಷವಿರುತ್ತೆ.

ಮೀನ

ತಾ|| 16 17 20 ನಿಮಗೆ ಉತ್ತಮ ಫಲವಿಲ್ಲ, ಚಂಚಲತೆ, ನಿಷ್ಠೂರ ವ್ಯಯಾಧಿಕ ಅನಾರೋಗ್ಯ ಸೂರ್ಯ ನಮಸ್ಕಾರ ಮಾಡಿ ಉಳಿಕೆ ದಿವಸ ಫಲ ಉತ್ತಮ. ಗೃಹಾಭಿವೃದ್ಧಿ ಕಾರ್ಯದಲ್ಲಿ ದಕ್ಷತೆ ಗೌರವಕ್ಕೆ ಸಂಬಂಧ ದರ್ಶನ ಉತ್ಸಾಹ ಕಾರ್ಯ.

ಆತ — ಇದೇನೇ ಒಟ್ಟಿಲಿ ತುಂಬಿಟ್ಟಿರೋದು?

ಈಕೆ—ಗಟ್ಟಿಯಾಗಿ ಕೂಗ್ಬೇಡ್ರಿ! ಸೆರೆನುಸೆಯವರ ಹಿಟ್ಲುಕಾಯಿ.

ವಿನೋದಲಹರಿ

(ಲೇ.—ಎಂ. ಎಸ್. ಕಮಲಮ್ಮಾಳ್)

ಯುವಕ—ನಾನು ನಿನಗೋಸ್ಕರ ಪ್ರಾಣ ಕೊಡುತ್ತೇನೆಂದರೂ ಸಹ ನೀನು ಒಂದು ಜಾರಿಯಾದರೂ ನಿನ್ನ ಪ್ರೇಮ ಕಟಾಕ್ಷವನ್ನು ನನ್ನ ಮೇಲೆ ಬೀರುವದಿಲ್ಲ.

ಯುವತಿ—ಏಲಿ ನೀನು ನನಪಾಗಿ ಪ್ರಾಣ ಕೊಟ್ಟಮೇಲಲ್ಲವೇ ನಾನು ನನ್ನ ಕಟಾಕ್ಷ ಬೀರುವುದು.

○ ○ ○

ಗುರು—ಹುಡುಗರಿರಾ ನಾನು ಕಷ್ಟಪಟ್ಟು ಪಾಠ ಹೇಳಿಕೊಡುತ್ತೀನಿ. ಅದ್ದರಿಂದ ನನಗೆ ನೀವು ಗುರು ದಕ್ಷಿಣೆ ಕೊಡಬೇಕು.

ಕಿಟ್ಟಿ—ಸಾರ್ ಈವತ್ತಿಂದ ನನಗೆ ಪಾಠ ಹೇಳಿಕೊಡಬೇಡಿ. ನಿವಗೆ ಕಷ್ಟತಪ್ಪುತ್ತೆ, ಅದ್ದರಿಂದ ನೀವು ಕೇಳಿದ ದಕ್ಷಿಣೆಯನ್ನು ಕೊಡಬೇಕು.

○ ○ ○

ಸರೋಜಮ್ಮ—ರೀ, ಕಮಲನ ನನಲೇ ನೀವು ನನಗೆ ಒಂದು ಶಾಲಾಲಾಲ್ಟೆ ವೋಟೋ ಕೊಟ್ಟರೆ ನಾನು ನೀವು ಕೇಳಿದ್ದನ್ನು ಕೊಡುತ್ತೇನೆ

ಕಮಲಮ್ಮ—ಪಾಗಾದರೆ ನನಗೆ ಒಂದು ಸೇರು ಕೋಣಿನ ಹಾಲು ತಂದು ಕೊಡ್ತೀರಾ.

○ ○ ○

ಮಾಧು—ಪರಂಧಾಮವರೆ ಟೊಪ್ಪಿಗೆ ತೆಗೆದು ಎಲ್ಲರಿಗೂ ಅದರಲ್ಲೂ ಹೆಂಗಸರಿಗೆ ಹೆಚ್ಚಾಗಿ ತಲೆವಾಗಿಸುವದೆತ್ತಕ್ಕೆ.

ಶಂಭು—ಅಯ್ಯೋ ಮಂಕೆ ಅಷ್ಟು ತಿಳಿಯದೆ, ತಾವು ಕಾಪಾ ತ್ತಿದ್ದರುವುದನ್ನು ಹೆಂಗಸರು ನೋಡಿ ಮೋಹಗೊಳ್ಳಲೆಂದು.

○ ○ ○

ಆಕೆ—ನಿನ್ನ ಕಣ್ಣು ನೋವಿಗೆ ಏನಾದ್ರೆ ಔಷಧಿ ಹಾಕಿದ್ದಿಯ?

ಈಕೆ—ಏನೂ ಇಲ್ಲ.

ಆಕೆ—ಹೊಗಾದರೆ ಸ್ವಲ್ಪ ಟಿಂಚರ್ ಅಯೋಡೀನ್ ಹಾಕಿಸಿಡು ಪುನಃ ಕನ್ನಡಿನೆ ಒರೆಸೋದಿಲ್ಲ.

○ ○ ○

ಹಾಲು ಪಾನೀಯಗಳು

ನಮಲಿ ಬಂದು ವಿಶೇಷವೆನಿಸಿ

ಕೆನೆ, ಬೆಣ್ಣೆ, ಅತಿ ಮಧುರವಾದ ಕ್ರೀಮ್, ಇವುಗಳಿಗೆ
ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿಸನ್ನಿ ಡೈರಿ ಟೆಲಿಫೋನ್ ನಂಬರು 402
ಹಳೇ ಪೋಸ್ಟಾಫೀಸ್ ರಸ್ತೆ, ಮೈಸೂರು

ಹಿಂದೂದೇಶ

ಅಲ್ಲಾಬಕ್ಷರ ಅಧ್ಯಕ್ಷತೆಯಲ್ಲಿ ಸ್ವತಂತ್ರ ಮುಸ್ಲಿಮರ ಸಮ್ಮೇಳನವು ಡೆಲ್ಲಿಯಲ್ಲಿ ನಡೆದು, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಲು ಒತ್ತಾಯ ಪಡಿಸುವ ನಿರ್ಣಯವನ್ನು ಮಂಜೂರ್ಮಾಡಲಾಯಿತು.

ಕಾಶ್ಮೀರದಲ್ಲಿ ಮಹವೀಯರಿಗಿರುವ ತೊಂದರೆ ವಿಷಯಗಳು ಡೆಲ್ಲಿಯಲ್ಲಿ ನಡೆದ ಮುಸ್ಲಿಂ ಲೀಗ್ ಕೌನ್ಸಿಲ್ಲಿನಲ್ಲಿ ಚರ್ಚಿಸಲ್ಪಟ್ಟಿತೆಂದೂ, ಸಂಸ್ಥಾನಗಳು ಪಾಕಿಸ್ತಾನದ ಕಂಚಿಕೆಗೆ ಒಳಪಟ್ಟಿಲ್ಲವೆಂದೂ, ಪಂ|| ಜಿನ್ನಾರವರು ತಿಳಿಸಿದರೆಂದು ಪ್ರಕಟಿಸಲಾಗಿದೆ.

ಕಲ್ಕತ್ತೆಯಲ್ಲಿನ ಹಲಸಿಬಜನಪಾರ್ಕಿನಲ್ಲಿ ಕಾಳಿ ಪೂಜೆಗಾಗಿ ಹಾಕಿದ್ದ ಮಂಟಪಕ್ಕೆ ಬೆಂಕಿಬಿದ್ದು 130 ಮಂದಿ ಸುಟ್ಟು ಹೋದರು 100 ಮಂದಿ ಹೆಚ್ಚಾದ ಅಪಾಯಕ್ಕೊಳಗಾಗಿದ್ದಾರೆ. ಕಲ್ಕತ್ತೆಯಲ್ಲಿ ಇಲ್ಲಿಯವರೆಗೆ ಎಂದೂ ಇಂತಹ ಬೆಂಕಿ ಅನಾಹುತ ನಡೆದೇ ಇದಲಿಲ್ಲವೆಂದು ತಿಳಿಯಬಂದಿದೆ. ಎಷ್ಟಕ್ಕೆ ಒಳಗಾಗಿರುವರಲ್ಲಿ ಹೆಚ್ಚು ಮಂದಿ ಹೆಂಗಸರುಮಕ್ಕಳೆಂದು ತಿಳಿಯಬರುತ್ತದೆ.

ಬೆಳಗಾಂ ಬಾಗಲಕೋಟೆ ರಸ್ತೆಯಲ್ಲಿ ಸಂತೆಸಾಗಿ ಆಹಾರ ಪದಾರ್ಥ ಅಕ್ಕಿ, ರಾಗಿ, ಬೇಳೆ ಮುಂತಾದುವನ್ನು ತರುತ್ತಿದ್ದ 15 ಗಾಡಿಗಳನ್ನು, ಮುಖಕ್ಕೆ ಕವುಚಿಟ್ಟಿಯನ್ನು ಮುಚ್ಚಿಕೊಂಡಿದ್ದ ಒಂದು ಗುಂಪಿನವರು ಅಡ್ಡಗಟ್ಟಿ, ಗಾಡಿಯವನನ್ನು ಹೊಡೆದು ಪದಾರ್ಥಗಳನ್ನು ಸಾಗಿಸಿಕೊಂಡು ಪರಾರಿಯಾಗಿರುವರು.

ಅಖಿಲ ಭಾರತ ಕಾಂಗ್ರೆಸ್ಸಿಗೆ ಸೇರಿದ ಮೆ || ಬಜಂತ್ರಾಜ್ ಕಂಪೆನಿಯಲ್ಲಿದ್ದ 11395 ರೂಪಾಯೀಗಳನ್ನು ಬೊಂಬಾಯಿ ಸರ್ಕಾರದವರು ವಶಪಡಿಸಿಕೊಂಡಿರುವರೆಂದು ತಿಳಿಯಬಂದಿದೆ.

ಪೇಪರ್ ಕಂಟ್ರೋಲ್ ಆರ್ಡರನ್ನು ಇಂಡಿಯಾ ಸರಕಾರದವರು ಜಾರಿಗೆ ತಂದಿರುತ್ತಾರೆ.

ತಂಕಾಸಿಯಲ್ಲಿ ಖಾನಿರ ಮಂದಿಗೆ ಮೇಲ್ಪಟ್ಟ ದೊಂಬಿಗಾರರ ಗುಂಪು 3 ಮಿಲ್ಲುಗಳಲ್ಲಿ ತುಂಬಲ್ಪಟ್ಟಿದ್ದ ಅಕ್ಕಿ ಮತ್ತು ಭತ್ತದ ಮೂಟೆಗಳನ್ನು ಲೂಟಿ ಮಾಡಿತೆಂದೂ, 4 ನೇ ಮಿಲ್ಲನಲ್ಲಿ ಹೀಗೆ ಮಾಡಲು ಹೊಂಟಾಗ ಡೆ || ಪೋ || ಸೂಪರಿಂಟಿಂಡೆಂಟರು ಬಂದ 8 ಮಂದಿಯನ್ನು ದಸ್ತಗಿರಿ ಮಾಡಿದರೆಂದೂ ತಿಳಿಯಬಂದಿದೆ.

ಭಾರತವನ್ನು ಮೊದಲು ಸ್ವತಂತ್ರವನ್ನಾಗಿ ಮಾಡಿ. ಇದೇ ಯುದ್ಧದ ಪ್ರಥಮ ನೀತಿಯಾಗಿದೆಯೆಂದು ಅಮೇರಿಕಾದ ಗುಂಥರ್ ಸಹಿಯವರು ಅಭಿಪ್ರಾಯಪಟ್ಟಿರುವರು.

ವಿದೇಶ

ಪ್ರೆಸಿಡೆಂಟ್ ರೂಸ್‌ವೆಲ್ಟರು ಜನರಲ್ ಫ್ರಾಂಕೋವಿಗೂ ಮತ್ತು ಜನರಲ್ ಕಾರ್ನ್‌ಮೊನಾರವರಿಗೂ ಒಂದೊಂದು ಸಂದೇಶವನ್ನು ಕಳುಹಿಸಿದ್ದಾರೆ. ಅದರಲ್ಲಿ ಸ್ಪೇನ್ ಮೇಲಾಗಲೀ ಪೋರ್ಚುಗಲ್ ಮೇಲಾಗಲೀ, ಸಂಯುಕ್ತ ರಾಷ್ಟ್ರಕ್ಕೆ ಭಿನ್ನಾಭಿಪ್ರಾಯವಿಲ್ಲವೆಂದೂ, ಅವರಿಗೆ ತಮ್ಮಿಂದ ಯಾವ ತೊಂದರೆಯೂ ಸಂಭವಿಸದೆಂದೂ ಭರವಸೆ ಕೊಟ್ಟಿದ್ದಾರೆ.

1943 ರಲ್ಲಿ ಎರಡನೇ ರಣಾಂಗ ಪ್ರಾರಂಭವನ್ನು ಮಾಡಲಾಗುವುದೆಂದು ಅಮೆರಿಕಾ ಯುದ್ಧದ ಅಂಡರ್ ಸೆಕ್ರೆಟರಿಯವರಾದ ಜಡ್ಜ್ ರಾಬರ್ಟ್ ಪ್ಯಾಟರ್‌ಸೆನ್‌ರವರು, 8 ನೇ ತಾರೀಖು ಬಾಸ್ಟನ್ನಿನ ಒಂದು ಕ್ಲಬ್ಬಿನಲ್ಲಿ ಮಾಡಿದ ಭಾಷಣದಲ್ಲಿ ವಾಗ್ದಾನ ಮಾಡಿರುವರೆಂದು ತಿಳಿಯಬಂದಿದೆ.

ಹಿಟ್ಲರನು ಮ್ಯೂನಿಚ್ಚಿನಲ್ಲಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿರುವನು— ಉತ್ತರ ಆಫ್ರಿಕಾದಲ್ಲಿ ಸಂಯುಕ್ತ ಅಮೇರಿಕಾವು ಮುಂದಾಗಿ ನಾವು ಹಿಂದಾಗಿದ್ದೇವೆ, ಆದರೆ ಈ ಯುದ್ಧದಲ್ಲಿ ಕಟ್ಟ ಕಡೆಯದನ್ನು ನಿಷ್ಕರ್ಷಿಸುವವರು ಅಮೇರಿಕನ್ನರಲ್ಲ. ನಾವು. ನಿವಾರೂ ಹೋಬೆಸಬೇಡಿ, ನಾವು ತೂಕಡಿಸುತ್ತಿಲ್ಲ. — ಬ್ರಿಟಿಷರ ಆಕ್ರಮಣದ ಒಗ್ಗಿ ಹೇಗಾತ್ತಾ, ನಾವು ವಾರಪಾರ ಜಯವನ್ನೇ ಪಡೆಯುವುದು ದುಸ್ತರ ಸಮಯ ಬಂದಾಗ ನಾವು ಹೆಚ್ಚು ಹೆಚ್ಚಾಗಿ ಮುಂದುವರಿದು ತೋರಿಸುತ್ತೇವೆ ಪ್ರತಿಯೊಬ್ಬ ಜರ್ಮನ್ನೂ ನನ್ನಲ್ಲಿ ನಂಬಿಕೆಯಿಡಲಿ. ಈ ಯುದ್ಧದಲ್ಲಿ ಜರ್ಮನರ ಅಳಿವುಉಳಿವುಗಳು ಅಡಗಿವೆ.

ಇಲ್ಲಿಯವರೆಗೆ ಒಟ್ಟು 1 ಲಕ್ಷ 40 ಸಾವಿರ ಮಿತ್ರ ಸೈನಿಕರು ಉತ್ತರ ಆಫ್ರಿಕಾದಲ್ಲಿ ಬಂದು ನೆಲೆಸಿದ್ದಾರೆ

ಸೆಪ್ಟಂಬರ್ 1 ರಿಂದ ಅಕ್ಟೋಬರ್ 20 ರವರೆಗೆ ಕಾಕ್ಸಸ್ಸಿನಲ್ಲಿಯ ಮೊಜ್ಡಾಕ್ ಪ್ರದೇಶದಲ್ಲಿ 39 ಸಾವಿರ ಮಂದಿ ಸೈನಿಕರು ಸತ್ತತು, 772 ಟ್ಯಾಂಕುಗಳು ಕಟ್ಟಹೋದವು. ಸ್ಟಾಲಿನ್‌ಗ್ರಾಡ್ ರಂಗದಲ್ಲಿ 150 ಸಾವಿರ ಮಂದಿಗಿಂತ ಹೆಚ್ಚಾಗಿ ಸತ್ತರು, ಟ್ಯಾಂಕುಗಳ ನಷ್ಟ 2200.

ಜನರಲ್ ಯಾಂಗ್ ಕೈಷೇಕರಿಗೆ "ಡಾಕ್ಟರ್ ಆಫ್ ಸಿವಿಲ್ ಲಾ" ಎಂಬ ಪ್ರಶಸ್ತಿಯನ್ನು ಕೊಡುವ ಸೂಚನೆಯನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಅಂಗೀಕರಿಸಿದೆ. ಯುದ್ಧವು ಮುಗಿದನಂತರ ಈ ಪ್ರಶಸ್ತಿಯನ್ನು ಕೊಡಲಿರುವರೆಂದು ತಿಳಿಯಬರುತ್ತದೆ.

ತುಲಾಭಾರ

ಭಾರತ ದೇಶೀಯ ರಾಜರಲ್ಲಿರುವ ಪ್ರಾಚೀನ ಪದ್ಧತಿಗಳಲ್ಲಿ ಇದು ಒಂದು. ತುಲಾಭಾರವೆಂದರೆ ತಮ್ಮ ತೂಕದಷ್ಟು ಭಂಗಾರವನ್ನು ತೂಕಮಾಡಿಸಿಕೊಂಡು ಅದನ್ನು ಅರ್ತರಿಗೆ ವಿನಿಯೋಗ ಮಾಡುವಿಕೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣನು ಈ ಪದ್ಧತಿಯನ್ನು ಅವಲಂಬಿಸಿರುವನು. ಕೃಷ್ಣ ತುಲಾಭಾರ ಎಂಬ ನಾಟಕವನ್ನು ಇಂದಿಗೂ ಅನೇಕ ಕಡೆಗಳಲ್ಲಿ ಆಡುವರು.

ಘನತೆಹೊಂದಿದ ಆಗಾಖಾನರು 1938 ಲ್ಲಿ ಬೊಂಬಾಯಿನಲ್ಲಿ ತುಲಾಭಾರ ಮಹೋತ್ಸವವನ್ನು ನಡೆಸಿಕೊಂಡರು. ಅವರ ತೂಕ 9500 ತೊಲಗಳ ಭಂಗಾರದಷ್ಟು ಇದ್ದಿತು ಆ ಭಂಗಾರದ ಆಸೆ ಬರೀದಿ 3 ಲಕ್ಷ 35 ಸಾವಿರ ರೂಪಾಯಿಗಳು. ಜೋಜಾ ನೀತಿಯ ಪುಡುಗರ ಆಧಿಪತ್ಯದ್ದಿಗೆ ಆಹ್ವಾನವು ವಿನಿಯೋಗವಾಗುತ್ತಿದೆ.

ಜಹಾಂಗೀರ್ ಚಕ್ರವರ್ತಿಯು ತುಲಾಭಾರ ಮಾಡಿಸಿಕೊಂಡಾಗ 160 ಪೌಂಡುಗಳ ಭಂಗಾರವು ವಿದ್ವಾಂಸರಿಗೂ ಬ್ರಾಹ್ಮಣರಿಗೂ ಹಂಚಲ್ಪಟ್ಟಿತು.

1870 ರಲ್ಲಿ ತಿರುವಾಂಕೂರು ಮಹಾರಾಜರ ತುಲಾಭಾರ ಮಹೋತ್ಸವವು ನಡೆದಾಗ 204 ಪೌಂಡುಗಳ ತೂಕವುಳ್ಳ ಭಂಗಾರವು ಆರಾಜ್ಯದ ಪೂಜಾರಿಗಳಿಗೂ ವೈದಿಕ ಸ್ತ್ರೀ ಬಾಲರಿಗೂ ಹಂಚಲ್ಪಟ್ಟಿತು.

ಸ್ವರ್ಣ ದಾನವು ಮಹಾದಾಳ್ಳಿನಗ

ವಿವಿಧ ವರ್ತಮಾನ

ನೀರನ್ನು ಮಿತವಾಗಿ ಬಳಸಬೇಕೆಂದು ಮದ್ರಾಸು ಸರಕಾರದವರು ಜನರಿಗೆ ಎಚ್ಚರಿಕೆಯನ್ನು ಕೊಟ್ಟಿರುವರು.

ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಮದುವೆಗಳು ಹೆಚ್ಚಾಗಿ ನಡೆಯುವವು ಬುಧವಾರದ ದಿನ. ಇಂಡಿಯಾದಲ್ಲಿ ವಿನಹಾ ಮತ್ತೆಲ್ಲಿಯೂ ಸಾಧಾರಣವಾಗಿ ಮದುವೆಯು ಶುಕ್ರವಾರದ ದಿನ ನಡೆಯುವುದಿಲ್ಲ.

ಫ್ರೆಂಚ್ ಆಫ್ರಿಕಾವಲ್ಲಿ ಸಂಯುಕ್ತ ರಾಷ್ಟ್ರಗಳು ದಿಗ್ವಿಜಯ ಪಡೆದಿವೆ. ಅಮೇರಿಕನ್ನರು ಬ್ರಿಟಿಷ್ ಸೈನ್ಯದೊಡನೆ ಕೂಡಿ ತಂಡತಂಡವಾಗಿ ಬಂದು ಇಳಿಯುತ್ತಿದ್ದಾರೆ.

ಧಾರವಾಡ ಜಿಲ್ಲೆಯ ಅನೇಕ ಗ್ರಾಮಗಳ ಮೇಲೆ ಪುಂಡು ಕಂದಾಯ ವಿಧಿಸಲಾಗಿದೆ.

ಒಂದು, ಅದರಲ್ಲಿಯೂ ತನ್ನ ದೇಹದ ತೂಕದಷ್ಟು ಭಂಗಾರವು ಸದ್ವಿನಿಯೋಗ ಮಾಡುವದೆಂದರೆ ಸಾಮಾನ್ಯವಾದ ಮಾತಲ್ಲ. ರಾಜರಿಗೆ ಮಾತ್ರ ಹೀಗೆ ಮಾಡಲು ಸಾಧ್ಯವಾದುದರಿಂದಲೇ ಈ ಪದ್ಧತಿಯು ಹೆಚ್ಚಾಗಿ ಅವರಲ್ಲಿ ಮಾತ್ರ ಜಾರಿಯಲ್ಲಿದೆ. (ಓಂ)

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ದೇಶಾಭಿಮಾನ, ಸ್ವಾಭಿಮಾನ

ಇವುಗಳೆರಡರ ದೃಷ್ಟಿಯಿಂದಲೂ ಮೈಸೂರಿನವರಿಗೆ ಜೀವವಿಮೆ ಮಾಡಲು

ಮೈಸೂರು ಸರ್ಕಾರದ ಜೀವವಿಮೆ ಇಲಾಖೆಯು

ಪ್ರಜೆಗಳ ಶಾಟೆಯೇ ಅತ್ಯುತ್ತಮ ಸಂಸ್ಥೆ

ವಿಮೆಯ ಮೊಬಲಗಿಗೆ ಸರ್ಕಾರದ ಹುಟ್ಟುವಳಿಯೇ ಆಧಾರ

ವಿಮೆಯ ಹಣವನ್ನು ಸ್ವಲ್ಪವೂ ಸಾವಕಾಶವಿಲ್ಲದೆ ಪಾವತಿ ಮಾಡಲಾಗುವದು

ವಿಮೆದಾರರಿಗೆ ಆಡಳಿತ ಸಮಯದಲ್ಲಿ ಪ್ರಾತಿನಿಧ್ಯ ಉಂಟು

ಸಾವಿರಕ್ಕೆ ಸಾಲಿಯಾನಾ ಇಪ್ಪತ್ತು ರೂಪಿಗಳಂತೆ ಬೋನಸ್ ಹಂಚಿದೆ

ಹೆಚ್ಚು ವಿವರಗಳಿಗೆ ದಯವಿಟ್ಟು ಬರೆಯಿರಿ—

ಸೆಕ್ರೆಟರಿ,
ಮೈಸೂರು ಸರ್ಕಾರದ ಜೀವವಿಮೆ ಇಲಾಖೆ,
ಬೆಂಗಳೂರು

ಅಪೇರ = ಶಿವಲಿಂಗನಾಕಿ

ಅನೋಘ 3 ನೇ ವಾರ ಳಿ

ಎಲ್ಲಾ ವಿಧದ ನಿಶ್ಶಕ್ತಿಗೂ
ಶಕ್ತಿಸುಧಾ
ಸೇವನೆ ಅಮೃತಪ್ರಾಯವಾದುದು
ಬೆಲೆ ಒಂದು ರೂಪಾಯಿ
ಏಜೆಂಜರು—ಧನ್ವಂತರಿ ವೈದ್ಯಶಾಲಾ
ಲ್ಯಾನ್ಸ್‌ಡೌನ್ ಬಜಾರ್ : : ಮೈಸೂರು

ಉತ್ತಮ ಕಾಫೀ
ಸವಾಸನೆ! ಅತ್ಯಂತ ರುಚಿ!
ಯಾವಾಗಲೂ ಲಕ್ಷ್ಮೀನಾರಾಯಣ
ಕಾಫೀಪುಡಿಯನ್ನೇ ಉಪಯೋಗಿಸಿ.
ಲಕ್ಷ್ಮೀನಾರಾಯಣ ಕಾಫೀವರ್ಕ್ಸ್
ಕೊಳ್ಳೇಗಾಲ

The Indian Marriage Gazette

The only illustrated monthly Journal of its kind in India containing very interesting aud instructive articles on matrimonia-topics.

Every home should have a copy of this unique journal as it will help to solve the problem of marriage both now and in tuture.

Annual subscription Rs 3.
Sample copy As. 4 in stamps.
Wanted Agents everywhere
Apply ...
The Indian Marriage Gaxette
Bangalore City

ಮೈಸೂರು ವೈದ್ಯ ಪತ್ರಿಕೆ
ಈ ಉತ್ತಮ ಸಚಿತ್ರ ಕನ್ನಡ-ತೆಲಗು
ಮಾಸಪತ್ರಿಕೆಗೆ
ಚಂದಾದಾರರಾಗಿರಿ
ವಾರ್ಷಿಕ ಚಂದಾ ರೂ. 2—4—0
ಪ್ರತಿ 4 ಆಣೆ.
ಕಾರ್ಯಾಲಯ ;
ತ್ರಿವಾಸವಾಂಬ ಭವನ
ಅಶೋಕಾ ರಸ್ತೆ — ಮೈಸೂರು

Saraswati Printing Press
Lansdowne Buildings, Mysore
— & —
Lakshminarasimha Press
Srirampet, Mysore

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಮುಗಿಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.
ಸತ್ಯವಾದಿ ಆಫೀಸ್ ಮೈಸೂರು.

ಈ ವಾರದ ಕಥೆ

ಮುಂದಾಲೋಚನೆ ಇರಬೇಕು

(ಲೇಖಕಿ—ಶ್ರೀ. ಎ. ರಂಗನಾಯಕಿ)

ಒಂದಾನೊಂದು ಕಾಲದಲ್ಲಿ ಒಬ್ಬ ಧೊರೆಯಿದ್ದನು! ಅವನ ಆಸ್ಥಾನಕ್ಕೆ ಪ್ರತಿದಿನವೂ ಒಬ್ಬ ಸನ್ಯಾಸಿಯು ಒಂದು ರಾಜನನ್ನು ಆಶೀರ್ವದಿಸಿ ಒಂದು ಹಣ್ಣನ್ನು ಕೊಟ್ಟು ಹೋಗುತ್ತಿದ್ದನು. ಹೀಗಿರಲು ಒಂದು ದಿನ ಆ ಸನ್ಯಾಸಿಯು ಒಂದು ಮುದ್ದಾದ ಗಿಣಿಯನ್ನು ತಂದು ರಾಜನ ಕೈಯ್ಯಲ್ಲಿಟ್ಟು " ಇದು ದೇವಲೋಕದ ಗಿಣಿ, ತ್ರಿಕಾಲಜ್ಞಾನಿ. ಇದನ್ನು ಚೆನ್ನಾಗಿ ಸಾಕು " ಎಂದು ಹೇಳಿ ರಾಜನನ್ನು ಆಶೀರ್ವದಿಸಿ ಹೊರಟು ಹೋದನು.

ರಾಜನು ಹಾಗೆಯೇ ಅದನ್ನು ಬಹಳ ಅಕ್ಕರೆಯಿಂದ ಸಾಕುತ್ತಾ ಬಂದನು. ಪ್ರತಿದಿನವೂ ಆ ಗಿಣಿಯು ದೇವಲೋಕಕ್ಕೆ ಹೋಗಿ ಅಲ್ಲಿಯ ಸಮಾಚಾರಗಳನ್ನು ತಿಳಿದುಕೊಂಡು ಬಂದು ರಾಜನಿಗೆ ಹೇಳಿ ಅವನನ್ನು ಸಂತೋಷಗೊಳಿಸುತ್ತಿದ್ದಿತು.

ಹೀಗಿರಲು ಒಂದು ದಿನ ಆ ಗಿಣಿಯು ದೇವಲೋಕದಿಂದ ಒಂದು ಮಾವಿನ ಟಿಪಿಯನ್ನು ಬಾಯಲ್ಲಿ ಕಚ್ಚಿಕೊಂಡು ಬಂದು, ರಾಜನನ್ನು ಕುರಿತು — ರಾಜನೇ ಲಾಲಿಸು, ಈ ಟಿಪಿಯನ್ನು ತಿನ್ನುವುದರಿಂದ ಬಹಳ ವಿಚಿತ್ರವಾದುದು. ಇದನ್ನು ನಾನು ದೇವಲೋಕದಿಂದ ಒಂದು ತಾರಿಯಲ್ಲಿ ಒಬ್ಬ ಋಷಿಯ ಆಶ್ರಮದಿಂದ ಅವನನ್ನು ಕೇಳಿ ತೆಗೆದುಕೊಂಡು ಬಂದೆನು. ಇದರ ವಿಚಿತ್ರವೆಯು ಏನೆಂದರೆ, ಇದನ್ನು ಎಂತಹ 90 ವಯಸ್ಸಿನ ಮುದುಕನು ತಿಂದರೂ 16 ವಯಸ್ಸಿನ ಸುಂದರ ಹುಡುಗನಾಗುತ್ತಾನೆ. ಮತ್ತು ಇದರಷ್ಟು ಸಿಹಿಯೂ ಸುಗಂಧವೂ ಇದ ಹಣ್ಣನ್ನು ನಾನು ಎಲ್ಲಿಯೂ ನೋಡಿಲ್ಲ. ಆದುದರಿಂದ ಇದನ್ನು ನಿನ್ನ ಉದ್ಯಾನವನದಲ್ಲಿ ನೆಡು, ಎಂದು ಹೇಳಿದನು. ರಾಜನು ಸಂತೋಷದಿಂದ ಅದನ್ನು ತನ್ನ ಉದ್ಯಾನವನದಲ್ಲಿ ನೆಡಿಸಿದನು. ಸ್ವಲ್ಪ ದಿನಗಳಲ್ಲೇ ಅದು ಚೆನ್ನಾಗಿ ಬೆಳೆದು ಫಲಭರಿತವಾಯಿತು. ರಾಜನು ಆ ಹಣ್ಣಿನ ಪ್ರಮಾಣವನ್ನೂ, ಬಣ್ಣವನ್ನೂ ಸುವಾಸನೆಯನ್ನೂ ನೋಡಿ ನೋಡಿ ಆಶ್ಚರ್ಯಪಟ್ಟನು.

ಹೀಗಿರಲು ಮಂತ್ರಿಯ ತಾಯಿಗೆ ಏನೋ ಖಾಯಿಲೆಯಾಗಿ ಅವಳು ಸಾಯುವ ಹಾಗಾದಳು. ಆಗ ಧೊರೆಯು ಪರೀಕ್ಷೆಗಾಗಿ ಒಂದು ಹಣ್ಣನ್ನು ತಂದು ಅವಳಿಗೆ ಕೊಟ್ಟನು. ಆ ಹಣ್ಣನ್ನು ತಿಂದ ಕೂಡಲೇ ಆ ಮುದುಕಿಯು ಮೆಲ್ಲಮೆಲ್ಲಗೆ ಒದ್ದಾಡುತ್ತಾ ತನ್ನ ಪ್ರಾಣವನ್ನು ಕೊಟ್ಟಳು. ರಾಜನಿಗೆ ಇದನ್ನು ನೋಡಿ ಗಿಣಿಯ ಮೇಲೆ ಕೋಪಬಂದು ಮತ್ತೂ ವಿಚಾರಜ್ಞಾನವಿಲ್ಲದೆ ಅಂಧನಾಗಿ ಗಿಣಿಯ ಕತ್ತನ್ನು ಸುಲಿದು ಅವನ್ನು ಕೊಂದುಬಿಟ್ಟನು. ಮತ್ತು ಆ ಮರದಲ್ಲಿದ್ದ ಹಣ್ಣನ್ನೆಲ್ಲಾ ಕೀಳಿಸಿ ನದಿಯಲ್ಲಿ ಹಾಕಿಸಿ. ಆ ಮರದ ಸುತ್ತಲೂ ಮೆಳ್ಳಬೇಲಿ ಹಾಕಿಸಿ ಯಾರೂ ಆ ಮರದ ಹಣ್ಣನ್ನು ತಿನ್ನಕೂಡದೆಂದು ಆಜ್ಞೆ ಮಾಡಿದನು.

ಅದೇ ಊರಿನಲ್ಲಿ ಒಬ್ಬ ಅಗಸನಿದ್ದನು. ಅವನು ಬಹಳ ಕುರೂಪಿಯೂ ಪೆದ್ದನೂ ಆಗಿದ್ದನು. ಅವನ ಮುದಿ ತಾಯಿಯು ಒಬ್ಬ ಸುಂದರ ಹುಡುಗಿಯನ್ನು ತಂದು ಇವನಿಗೆ ಮದುವೆ ಮಾಡಿದಳು. ಆ ಹುಡುಗಿಗೆ ಗಂಡನನ್ನು ಕಂಡರೆ ಆಗುತ್ತಿರಲಿಲ್ಲ. ಯಾವಾಗಲೂ ಸಿಡಿಸಿಡಿಗುಟ್ಟುತಿದ್ದಳು. ಅದೂ ಅವಳ ಒಂದು ನಲ್ಲುಡಿಗಾಗಿ ಆ ಅಗಸನು ಅವಳ ರೂಪಿಗ ದಾಸನಾಗಿದ್ದನು. ಅವಳು ಬಹಳ ಗಂಡುಬೀರಿಯಾಗಿ ಆ ಮುದಿ ಅತ್ತೆಯನ್ನು ಬಹಳ ಹಿಂಸಿಸುತ್ತಿದ್ದಳು. ಮತ್ತು ಗಂಡನೊಡನೆ ಜಾಡಿ ಹೇಳಿ ಅತ್ತೆಯನ್ನು ಹೊಡೆಸುತ್ತಿದ್ದಳು. ಹಾಗೆಯೇ ಒಂದು ದಿನ ಜಗಳವಾಡಿ ಆ ಹಣ್ಣು ಮುದುಕಿ ಅತ್ತೆಯನ್ನು ಮೆಸೆಯಿಂದ ಒದಿಸಿಬಿಟ್ಟಳು. ಅವಳು ಬಹಳ ವ್ಯಸನದಿಂದ ಪ್ರಾಣದ ಮೇಲೆ ಆಸೆಯನ್ನು ತೊರೆದು ಪ್ರಾಣವನ್ನು ತೊರೆಯುವುದಕ್ಕಾಗಿ ಯಾರಿಗೂ ಕಾಣದಂತೆ ರಾತ್ರಿಯಲ್ಲಿ ಮಾವಿನ ಮರದ ಹತ್ತಿರಕ್ಕೆ ಒಂದು ಕೆಳಗೆ ಬಿದ್ದಿದ್ದ ಒಂದು ಹಣ್ಣನ್ನು ತಿಂದಬಿಟ್ಟಳು. ಕೂಡಲೇ ಅವಳು ಹದಿನಾರು ವರ್ಷದ ಬಾಲಿಕೆಯಾಗಿ ಮಾರ್ಪಟ್ಟಳು. ಅವಳಿಗೆ ತನ್ನ ರೂಪನ್ನು ನೋಡಿಕೊಂಡು ತಾಚಿಕೆಯೂ ಆಶ್ಚರ್ಯವೂ ಆಯಿತು. ಅವಳನ್ನು ನೋಡಿದವರೆಲ್ಲರೂ ಹಾಸ್ಯಮಾಡತೊಡಗಿದರು.

ಈ ಸುದ್ದಿಯು ರಾಜನ ಕಿವಿಗೆ ಬಿತ್ತು. ಅವನೂ ಆಶ್ಚರ್ಯಪಟ್ಟು ಹಣ್ಣನ್ನು ಕೆಲವರಿಗೆ ಪರೀಕ್ಷೆಗಾಗಿ ಕೊಟ್ಟು ನೋಡಿದನು. ಅವರೆಲ್ಲರೂ ಹಾಗೆಯೇ ಮಾರ್ಪಾಡಾದರು. ಆಗ ಅವನಿಗೆ ತಾನು ದುಡುಕಿ ವಿಚಾರಿಸದೆ ಆ ಗಿಣಿಯನ್ನು ಕೊಂದದ್ದಕ್ಕಾಗಿ ಬಹಳ ವ್ಯಸನವಾಯಿತು ಪಶ್ಚಾತ್ತಾಪಪಡತೊಡಗಿದನು.

ವಿವಿಧ ವರ್ತಮಾನಗಳು

1942 ರಲ್ಲಿ ನಾವು ದಂಡೆಯಾತ್ರೆಗಾಗಿ ಸಿದ್ಧರಾಗುತ್ತಿದ್ದೇವೆ, 'ಎಂಬದಾಗಿ ನಾವು ರಷ್ಯಾವಿಗೆ ಲಿಖಿತ ಮೂಲಕ ತಿಳಿಸಿದ್ದೇವೆ, ಆದರೆ ಅದನ್ನು ಈಗಲೇ ನಡೆಸುವುದಾಗಿ ಭರವಸೆ ಕೊಟ್ಟಿಲ್ಲ, ಎಂದು ಕಾಮನ್ಸ್ ಸಭೆಯಲ್ಲಿ ಮಿ|| ಚರ್ಚಿಲರು ತಿಳಿಸಿರುವರು.

ಹಿಟ್ಲರನು ಜರ್ಮನ್ ಸೈನ್ಯಕ್ಕೆ ವಿಚಿ ಫ್ರಾನ್ಸನ್ನು ಪ್ರವೇಶಿಸಲು ಆಜ್ಞೆಯಿತ್ತಿದ್ದಾನೆ. ಮಾರ್ಷಲ್ ಪೀಟನ್‌ರವರು ವಿರೋಧವನ್ನು ಹೂಡಿದ್ದಾರೆ. ಜರ್ಮನಿಯ ಯೋಧಸಡೆಗಳು ಮೊಟ್ಟಮೊದಲು ನಾಜೀ ಸೈನ್ಯವು ಆಕ್ರಮಿತ ಭಾಗದಿಂದ ಅನಾಕ್ರಮಿತ ಪ್ರದೇಶಕ್ಕೆ ಸಾಗುತ್ತಿರುವ ಸಮಯದಲ್ಲಿ ಕಾಣಿಸಿಕೊಂಡವು. ಪಡೆಗಳು ದಕ್ಷಿಣಕ್ಕೆ ಸಾಗುತ್ತಿವೆ.

ಹಿಟ್ಲರನಿಗೆ ಸೂಯಿಜ್ ಕಾಲುವೆಯ ಮೇಲಿನ ಹತೋಟಿಯನ್ನಿಟ್ಟುಕೊಳ್ಳಬೇಕೆಂಬ ಆಶೆಯು ಅಮಿತವಾಗಿದೆ. ಏಕೆಂದರೆ, ಆ ಮೂಲಕ ಮುಂದೆಯಾದರೂ ಪೂರ್ವ ದೇಶದಲ್ಲಿಯ ಪ್ರಾಂತ್ಯಗಳನ್ನೂ ತನ್ನ ಹತೋಟಿಯಲ್ಲಿ ಇಟ್ಟುಗೊಳ್ಳ ಬಹುದೆಂಮ ಯೋಚಿಸುವನು. ಆದರೆ ಕಾಕ್ಸಸ್ಸನ್ನು ದಾಟಿದರೂ ಹಿಟ್ಲರನಿಗೆ ಇರಾಕನ್ನು ದಾಟಲು ಹೆಚ್ಚು ಕಷ್ಟವಾಗುತ್ತದೆ. ಆ ಕಡೆ ಆಫ್ರಿಕಾದಲ್ಲಿ ವಿಶ್ವಮಂಡಲಿಯದರ ಕೈ ಜೋರಾಗಿದೆ. ಈಗಾಗಲೇ ಕಾಕ್ಸಸ್ಸಿನಲ್ಲಿ ಮುಂಜು ಬೀಳುತ್ತಿರುವುದರಿಂದ ಛಳಿಗಾಲದಲ್ಲಿ ಸೈನ್ಯ ಹೆಚ್ಚು ವಂಚು ತಡೆಯಲಾರದು. 1943 ರ ವಸಂತ ಋತುವಿನ ಹೊತ್ತಿಗೆ ಅವೇರಿಕಾದ ಬಲವು ಹೆಚ್ಚುವುದರಿಂದ ಹಿಟ್ಲರನು ನೆಪೋಲಿಯನ್ನನ ಅವಸ್ಥೆಯನ್ನು ಅನುಭವಿಸಬೇಕಾಗಿಬರಬಹುದು.

ಮೈಸೂರು ವಿಶ್ವವಿದ್ಯಾಸಿಲಯದ ಶ್ರೀ ಕೃಷ್ಣರಾಜಾ ಸಿಲ್ವರ್ ಜೂಬಿಲಿಯ ಈ ವರ್ಷದ ಲಕ್ಚರನ್ನು, ಡೆಲ್ಲಿಯ ಸಯಂಟಫಿಕ್ ಮತ್ತು ಇಂಡಸ್ಟ್ರಿಯಲ್ ರಿಸರ್ಚ್ ಬೋರ್ಡಿನ ಡೈರೆಕ್ಟರಾದ ಡಾ || ಸರ್ ಭಟ್‌ನಗರ್ ರವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಈ ತಿಂಗಳು 18 ನೇ ತಾರೀಖಿನ ದಿವಸ ಕೊಡುವರೆಂದೂ ; ಮತ್ತು ಈ ವರ್ಷದ ಅಪ್ಪೂರಾವ್ ಎಕ್ಸ್‌ಟೆನ್ಷನ್ ಲಕ್ಚರನ್ನು ಕೊಯಮತ್ತೂರಿನ ದಿವಾನ್ ಬಹದ್ದೂರ್ ಶ್ರೀ ರಾಮಲಿಂಗಂ ಚೆಟ್ಟಿಯಾರ್‌ರವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಈ ತಿಂಗಳು 26 ನೇ ತಾರೀಖಿನ ದಿವಸ ಕೊಡುವರೆಂದೂ ವಿಶ್ವವಿಲಯದ ರಿಜಿಸ್ಟ್ರಾರರು ಪ್ರಕಟಿಸಿವ್ವಾರೆ.

ಮೈಸೂರು ಸರಕಾರದ ಅಡ್ವೊಕೇಟ್ ಜನರಲ್ ಸ್ಥಾನಕ್ಕೆ ಈ ತಿಂಗಳು 16 ನೇ ತಾರೀಖಿನಿಂದ ಬೆಂಗಳೂರು ಅಡ್ವೊಕೇಟರಾದ ಶ್ರೀ ಲಕ್ಷ್ಮಣ ಗೌಡರು ನಿಯಮಿಸಲ್ಪಟ್ಟಿರುವುದಾಗಿ ತಿಳಿಯಬಂದಿದೆ.

ಹಿಟ್ಲರಿಗೆ ಶತ್ರು ಭೀತಿ ಹೆಚ್ಚಾಗಿರುವೆಂದೂ, ಇನ್ನೂ ಅನೇಕ ತೊಂದರೆಗಳು ಬಾಧಿಸುತ್ತಿರುವುವೆಂದೂ, ಅದಕ್ಕಾಗಿ ಅತನು ತನ್ನ ಎರಡನೆ ಹೆಡ್‌ಕ್ವಾರ್ಟರ್‌ನ್ನು ಬರ್ಲಿನ್ ಪಟ್ಟಣದ 20 ಮೈಲಿ ದೂರದಲ್ಲಿ ನಿರ್ಮಿಸಿಕೊಂಡಿರುವನೆಂದೂ ಬರ್ಲಿನ್ನಿನಿಂದ ಒಂದ ವರ್ತಮಾನವನ್ನು ಸ್ವಿಡ್‌ಜರ್ಲೆಂಡ್ ಪತ್ರಿಕೆಯೊಂದು ಪ್ರಕಟಿಸಿದೆ.

ಲಂಡನ್ನಿನ ಲಾರ್ಡ್ ಮೇಯರವರ ವಾರ್ಷಿಕ ಔತಣ ಕಾಲದಲ್ಲಿ ಮಿ || ಚರ್ಚಿಲ್ಲರು, ಉತ್ತರ ಆಫ್ರಿಕಾದಲ್ಲಿ ಅವೇರಿಕಾದವರ ಕಾರ್ಯವನ್ನು ಕುರಿತು, ಮಿ || ರೂಸ್‌ವೆಲ್ಟರು, ಅಗಾಧ ಕಾರ್ಯಕ್ರಮ-ಕರ್ತರಾಗಿರುವರೆಂದೂ, ತಾವು ಅವರ ಲೆಫ್ಟಿನೆಂಟಾಗಿರುವೆನೆಂದೂ ತಿಳಿಸಿರುವರು.

ಒಂದು ದಿನ ಸನ್ಯಾಸಿಯು ರಾಜನ ಸಮೀಪಕ್ಕೆ ಒಂದು ಗಿಣಿ ಎಲ್ತೆಂದು ಕೇಳಿದನು. ಆಗ ರಾಜನು ಎಲ್ಲಾ ಸಮಾಚಾರವನ್ನೂ ಹೇಳಿದನು. ಸನ್ಯಾಸಿಯು ರಾಜನನ್ನು ನೋಡಿ—ನೀನು ವಿಚಾರಿಸದೆ ಕೆಲಸವನ್ನು ಮಾಡಿದ್ದು ತಪ್ಪು. ಗಿಡದಲ್ಲಿ ಹಣ್ಣು ಬಿಡುವುದಕ್ಕೆ ಸ್ವಲ್ಪ ಮೊದಲೇ ಗರಡಸು ಒಂದು ಹಾವನ್ನು ಕಚ್ಚಿಕೊಂಡು ಹಾರಿಹೋಗುತ್ತಿರುವಾಗ ಅದರ ವಿಷವು ತೊಟ್ಟಿ ಈ ಮರದ ಹಣ್ಣು ವಿಷಭರಿತವಾಗಿದ್ದಿತು ಹನ್ನೆರಡು ವರ್ಷಗಳಾದುದರಿಂದ ಈಗ ಈ ಮರದಲ್ಲಿ ವಿಷವು ಹೋಯಿತು. ಆದುದರಿಂದ ಈಗ ಹಣ್ಣು ಚೆನ್ನಾಗಿದೆಯೆಂದು ಹೇಳಿ ಇನ್ನು ಮೇಲೆ ಹೀಗೆ ದುಡುಕಿನಿಂದ ಕೆಲಸ ಮಾಡಬೇಡ ಎಂದು ಬುದ್ಧಿವಾದವನ್ನು ಹೇಳಿ ಹೊರಟು ಹೋದನು. ಅಂದಿನಿಂದ ಆ ರಾಜನು ಸರಿಯಾಗಿ ರಾಜ್ಯವಾಳುತ್ತಿದ್ದುದರಿಂದ ರಾಜ್ಯವು ಆನಂದದಾಯಕವಾಗಿದ್ದಿತು.

[ಲೇಖಕರಿಗೆ ಸೂಚನೆ— ಚೆನ್ನಾಗಿರುವ ಚಿಕ್ಕ ಚಿಕ್ಕ ಕಥೆಗಳನ್ನು ಕಳುಹಿಸಿದರೆ ಸತ್ಯವಾದಿಯಲ್ಲಿ ಪ್ರಕಟಿಸಲಾಗುತ್ತೆ.]